ತುರುವೇಕೆರೆ ತಾಲ್ಲೂಕು ಸಂಪಿಗೆ-ಚಿಣ್ಣೂರು ರಸ್ತೆಗೆ ಡಾಂಬರು ಹಾಕುವುದು

1963 (2497) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ) (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಗಿರೇನ ಹಳ್ಳಿಯಿಂದ - ದೊಡ್ಡಗುಣಿಯವರೆಗೆ ತುರುವೇಕೆರೆ ತಾಲ್ಲೂಕಿನ ಸಂಪಿಗೆಯಿಂದ ಗುಬ್ಬಿ ತಾಲ್ಲೂಕಿನ ಅಂಬಿನವರೆಗೆ ಲೋಕೋಪಯೋಗಿ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗೆ ಸರ್ಕಾರದಿಂದ ಹಣ ಮಂಜೂರಾಗಿದ್ದರೂ ಕಾಮಗಾರಿ ವಿಳಂಬವಾಗಲು ಕಾರಣವೇನು;

ಇ) ಡಾಂಬರೀಕರಣವನ್ನು ಯಾವಾಗ ಪ್ರಾರಂಭಿಸಲಾಗುವುದು;

ಈ) ಎಷ್ಟು ದಿನದಲ್ಲಿ ಮುಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ತುರುವೇಕೆರೆ ತಾಲ್ಲೂಕು ಗಿರೇನಹಳ್ಳಿಯಿಂದ ದೊಡ್ಡ ಗುಣಿಯವರೆಗಿನ ರಸ್ತೆಯು ದೊಡ್ಡಗುಣಿ ಸಂಪಿಗೆ ಜಿಲ್ಲಾ ಮುಖ್ಯ ರಸ್ತೆಯ ಭಾಗವಾಗಿದ್ದು ವಾಹನ ಸಂಚಾರಕ್ಕೆ ಯೋಗ್ಯವಾಗಿದ್ದು, ಸುಸ್ಥಿತಿಯಲ್ಲಿರುತ್ತದೆ.

2. ತಯರಯವೇಕೆರೆ ತಾಲ್ಲೂಕಿನ ಸಂಪಿಗೆಯಿಂದ ಗುಬ್ಬಿ ತಾಲ್ಲೂಕಿನ ಅಂಚಿನವರೆಗಿನ ಸಪರಳಿ 15.50 ಕಿಮೀನಿಂದ 16.00 ಕಿಮೀವರೆಗಿನ ಅರ್ಧ ಕಿಮೀ ರಸ್ತೆಯು ತುರುವೇಕೆರೆ ನಿಟ್ಟೂರು ಜಿಲ್ಲಾ ಮುಖ್ಯ ರಸ್ತೆಯೆಂಬುದಾಗಿ ನಾಮಾಂಕಿತ ಗೊಂಡಿದ್ದು ರಸ್ತೆಯ ಹಲವು ಭಾಗಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸಂಪಿಗೆಯಿಂದ ಗುಬ್ಬಿ ತಾಲ್ಲೂಕಿನ ಅಂಚಿನವರೆಗಿನ ಜಿಲ್ಲಾ ಮುಖ್ಯ ರಸ್ತೆಯ ಹಾಳಾದ ಅರ್ಧ ಕಿಮೀ ಉದ್ದದ ಭಾಗದ ಅಭಿವೃದ್ಧಿಯನ್ನು ಬಯಲು ಸೀಮೆ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಂಡಿದ್ದು ಕಾಮಗಾರಿಯನ್ನು ವಹಿಸಿಕೊಂಡ ಗುತ್ತಿಗೆದಾರರ ವಿಫಲತೆಯಿಂದ ಕೆಲಸವು ಪೂರ್ಣಗೊಳ್ಳಲು ವಿಳಂಬವಾಗಿರುತ್ತದೆ.

ಇ) ಜನವರಿ 2003 ರಲ್ಲಿ ಡಾಂಬರ್ ಕೆಲಸವನ್ನು ಪ್ರಾರಂಭಿಸಲಾಗುವುದು.

ಈ) ಜನವರಿ 2003ರ ಅಂತ್ಯದೊಳಗೆ ಮುಗಿಸಲಾಗುವುದು.

ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಯ ಬಿ.ಸಿ.ಕಾವಲ್ ಅಳತೆ

1964 (2498) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಯ ಬಿ.ಸಿ.ಕಾವಲ್‌ನಲ್ಲಿ ಜಮೀನು ವಿವಾದದಲ್ಲಿ ರೈತರು ತೊಂದರೆ ಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದನ್ನು ಆಳಿದು ಸರಿಪಡಿಸಲು ತಾಲ್ಲೂಕು ಸರ್ವೆಯರ್‌ಗಳಿಂದ ಸಾಧ್ಯವಾಗದಿರುವುದು ತಿಳಿದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರ ಗಮನಹರಿಸಿ ತಕ್ಷಣ ಸರ್ವೆ ಕಾರ್ಯ ಮಾಡಿಸಿಕೊಡಲಾಗುವುದೆ; ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಹೌದು, ಬಂದಿದೆ.

ಆ) ಹೌದು ತಿಳಿದಿದೆ.

ಇ) ಈ ನಿಟ್ಟಿನಲ್ಲಿ ಈಗಾಗಲೇ ಬೆಂಗಳೂರು ವಿಭಾಗಿದ ಭೂದಾಖಲೆಗಳ ಜಂಟಿ ನಿರ್ದೇಶಕರು ಬೂಮಾಪನ ಇಲಾಖೆಯ ನಿರ್ದೇಶಕರಿಗೆ ವರದಿ ಸಲ್ಲಿಸಿ ಬಿ.ಸಿ.ಕಾವಲ್‌ನಲ್ಲಿ ಕೆಲಸ ಜಮೀನು ಮಂಜೂರಾದಂತೆ ದುರಸ್ತಿ ಆಗಿರುತ್ತದೆಯೆಂದು, ಸದರಿ ದುರಸ್ತಿ ಆದ ಪ್ರದೇಶದಲ್ಲಿ ಮಂಜೂರಾತಿ ಬಗ್ಗೆ, ಹಕ್ಕಿನ ಬಗ್ಗೆ ಹಾಗೂ ಎಲ್ಲೆ: ಗಡಿ ಬಗ್ಗೆ ಹಲವಾರು ಸಮಸ್ಯೆ ಉದ್ಭವವಾಗಿದ್ದು, ಸದರಿ ಸಮಸ್ಯೆಗಳನ್ನು ತಾಲ್ಲೂಕು ಭೂಮಾಪಕರುಗಳಿಂದ ನಿವಾರಣೆ ಮಾಡುವುದು ಸಾಧ್ಯವಿಲ್ಲವೆಂದು, ಈ ಕೆಲಸಕ್ಕೆ ವಿಶೇಷ ಕಾರ್ಯಪಡೆ ರಚಿಸುವುದು ಅಗತ್ಯವೆಂದು ತಿಳಿಸಿದ್ದಾರೆ. ಆದರಂತೆ ಉಪ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ತಾಲ್ಲೂಕು ತಹಸೀಲ್ದಾರ್ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರನ್ನೊಳಗೊಂಡಂತೆ ವಿಶೇಷ ಕಾರ್ಯಪಡೆಯೊಂದನ್ನು ರಚಿಸಿ ವಿವಾದಿತ ಜಮೀನಿನ ಆಳತೆ ಕಾರ್ಯವನ್ನು ಶೀಘ್ರವಾಗಿ ಪೂರೈಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬಂಡೀಪುರ ಅರಣ್ಯ ಅಂಚಿನ ಗ್ರಾಮಗಳಲ್ಲಿ ಕಾಡಾನೆಗಳನ್ನು ತಡೆಗಟ್ಟಲು ವಾಚರ್‌ಗಳ ನೇಮಕ

1965 (2202) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಂಡೀಪುರ ಅರಣ್ಯ ಅಂಚಿನ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟಲು ತಾತ್ಕಾಲಿಕವಾಗಿ ವಾಚರ್‌ಗಳನ್ನು ನೇಮಕ ಮಾಡಲಾಗುತ್ತಿದೆಯೇ;

ಆ) ನೇಮಕ ಮಾಡಿಕೊಂಡಿದ್ದಲ್ಲಿ, ಕಳೆದ ವರ್ಷದ ಕೂಲಿ ಹಣ ಪಾವತಿ ಮಾಡಲಾಗಿದೆಯೆ;

ಇ) ಮಾಡಲಾಗದಿದ್ದಲ್ಲಿ, ಕಾರಣವೇನು?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು.

ಆ) ಹಣವನ್ನು ಪಾವತಿಸಲಾಗಿದೆ

ಇ) ಉದ್ಭವಿಸುವುದಿಲ್ಲ.